

# ಮರವೂ ಮತದಾರನಾಗಿದ್ರೆ

■ ಸಿದ್ದನಗೌಡ ಬಿಜ್ಜೂರ ಸರೂರ
ಕಲೆ: ಸಂತೋಷ್ ಸಸಿಹಿತ್ಲು

ಮರವೂ ಮತದಾನ ಮಾಡಂಗಿದ್ರೆ
ಎಷ್ಟೊಂದ್ ಮಜ ಇರ್ತಿತ್ತು!
ನಾಡ ತುಂಬಾ ದೊಡ್ಡ ಗಿಡಗೋಳ
ದಟ್ಟ ಕಾಡೇ ಇರ್ತಿತ್ತು!

ಎಲೆಕ್ಷನ್ನಿಗಿ ನಿಲ್ಲುದಾದ್ರ
ಮರಕೂ ಮೀಸಲು ಸಿಗ್ತಿತ್ತು!
ಜಾಲಿ ಮರಾನೂ ಮಂತ್ರಿಯಾಗಿ
ವಿಧಾನಸೌಧ ಸೇರತಿತ್ತು!

ಮಾವಿನಮರ ಸಿಎಂ ಆಗಿ
ಗೌರ್ನಮೆಂಟ್ ನಡೆಸ್ತಿತ್ತು!
ವಿರೋಧಪಕ್ಷದ ನಾಯಕನಾಗಿ
ತೆಂಗಿನ ಮರಾನೂ ಮೆರೀತಿತ್ತು!

ಶ್ರೀಗಂಧ ಮರ ಸ್ಪೀಕರ್ ಆಗಿ
ಸದನ ನಡೆಸ್ತಿತ್ತು!
ಬೇವಿನ ಮರ ಭಾರಿ ಭಾರಿ
ಭಾಷಣಾ ಮಾಡ್ತಿತ್ತು!

ಅರಳಿ ಮರ ಅದೃಷ್ಟದಿಂದ
ಅರಣ್ಯ ಮಂತ್ರಿ ಆಕ್ಕಿತ್ತು!
ಕಾಡ ಕಡಿಯೋ ಕಳ್ಳರ ಹಿಡದು
ಜೈಲಿಗೆ ಹಾಕ್ತಿ ಅಂತಿತ್ತು!

ಊರೂರಿಗೊಂದು ದಟ್ಟ ಕಾಡು
ಯಾವಾಗ್ಲೂ ಇದ್ದ ಇರತಿತ್ತು!
ಮಕ್ಕಳ ಆಟಕ್ ಮರಗಳ ಸಖ್ಯ
ದಿನಾಲು ಸಿಕ್ಕೇ ಸಿಗತಿತ್ತು!

## ಕುಂಚ ಪ್ರಪಂಚ



ನೀತಿ ವಿಜಯ್
2ನೇ ತರಗತಿ, ವಿಶ್ವ ವಿದ್ಯಾ ಪೀಠ ಶಾಲೆ, ಯಲಹಂಕ, ಬೆಂಗಳೂರು









ಸ್ವರತ್ಮಿಕಾ ಕೆ.ಎಂ.
ನರ್ಸರಿ, ದಿ ಬಿಗ್ ಕೈಂಡ್‌ನೆಸ್ ಟ್ರಿ, ಬೆಂಗಳೂರು





ತನಯಾ ಎಚ್. ಸ್ತುತಿ
4ನೇ ತರಗತಿ, ಬಿಷಪ್ ಕಾಟನ್ ಗರ್ಲ್ಸ್ ಸ್ಕೂಲ್, ಬೆಂಗಳೂರು

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
ವಿಳಾಸ: editorsu@sudha.co.in